Regd No . M. 1299 SATYAVADI Founded 1917

ಸತ್ಯವಾದಿ

(ಅರಮನೆ ಸಿರಸ್ತೇದಾರ್ ಎಂ. ಪಿ. ಸುಬ್ಬರಾಯರಿಂದ ಸ್ಥಾಪಿಸಲ್ಪಟ್ಟದ್ದು)

ಸಂಪುಟ 30 ಸಂಚಿಕೆ 94] ಶುಕ್ರವಾರ 6—12—46 [ಬಿಡಿ ಪ್ರತಿ 3 ಸೈ

ಪತ್ರಿಕೋದ್ಯೋಗಿ ಸಂಘ

ಖಂಡನಾ ನಿರ್ಣಯಗಳು

ಮೈಸೂರು ಡಿ 6 — 'ಮೈಸೂರು ಪತ್ರಿಕೆ' ಪ್ರಿವಿಲೇಜಿನ ಬಗ್ಗೆ ಪಾರಸಭೆಯು ನಿರ್ಣಯವನ್ನು ಖಂಡಿಸುವುದು.

ಪಾರಸಭೆಗೆ ಪ್ರತಿಭಟನೆಯನ್ನು ಸೂಚಿಸುವ ಸಲುವಾಗಿ ಪೌರಸಭೆಯು ಇಂದಿಗಳನ್ನೆಲ್ಲಾ ಬಹಿಷ್ಕರಿಸುವುದು.

ಮೈಸೂರು ಪತ್ರಿಕೋದ್ಯೋಗಿ ಸಂಘದ ಅಧ್ಯಕ್ಷರಾದ ಶ್ರೀಮಾನ್ ಆಗಂ ರಂಗಯ್ಯನವರು ಪಾರಸಭಾಧಿವೇಶನದಲ್ಲಿ ಪತ್ರಿಕಾ ಗ್ಯಾವಕ್ಕೆ ವಿರೋಧವಾಗಿ 'ಮೈಸೂರು ಪತ್ರಿಕೆ' ವಿರುದ್ಧವು ತೆಗೆದುಕೊಟ್ಟಿದ್ದಕ್ಕಾಗಿ ಅಧ್ಯಕ್ಷರ ವರ್ತನೆಯನ್ನು ಖಂಡಿಸುವುದು—ಎಂಬ ನಿರ್ಣಯಗಳನ್ನು ಶ್ರೀ ಕೆ. ಅನಂತ ಸುಬ್ಬಾರಾಯರು ಇದೇ ತಾ|| 11 ರಲ್ಲಿ ನಡೆಯುವ ಪತ್ರಿಕೋದ್ಯೋಗಿ ಸಂಘದ ಸಭೆಗೆ ಕಳುಹಿಸಿಕೊಂಡರು. ಈ ದಿವಸ ಬೆಳಿಗ್ಗೆ ಅವುಗಳನ್ನು ಸಂಘದ ಸದಸ್ಯರುಗಳಲ್ಲಿ ಗೊತ್ತುಮಾಡಿಸುವ ಸಲುವಾಗಿ ಕಳುಹಿಸಲಾಯಿತು.

ಸಂಸ್ಥಾನದ ಸಂಗೀತಗಾರರ ಸಮ್ಮೇಳನ

ಮೈಸೂರು — ಮೈಸೂರು ಸಂಸ್ಥಾನದ ಸಂಗೀತಗಾರರ ಸಮ್ಮೇಳನವನ್ನು ನವಜ್ಯೋತಿ ಸ್ಟುಡಿಯೋವಿನ ಶ್ರೀ ಟಿ. ಆರ್. ರಾಮಯ್ಯನವರು ಆರಂಭಿಸುವುದಾಗಿ ತಿಳಿದು ಬಂದಿದೆ.

(ಹರಿಜನರು ದೇವಾಲಯವನ್ನು ಪ್ರವೇಶಿಸಿದರು)

ಬೆಂಗಳೂರು ಡಿ 5 — ಕಳೆದ ತಿಂಗಳು ತಾ|| 29 ರಲ್ಲಿ ಶ್ರೀ ಸೋಮೇಶ್ವರ ಸ್ವಾಮಿ ದೇವಾಲಯಕ್ಕೆ ಹರಿಜನ ಪ್ರವೇಶವಾಯಿತು.

೧೫ ಗಜ ಬಟ್ಟೆ

ನುದರಾಸು ಡಿ 4 — ಪ್ರತಿಯೊಬ್ಬರಿಗೂ ವರ್ಷಕ್ಕೆ 15 ಗಜ ಚಿಕ್ಕವರಿಗೆ ೭|| ಗಜ ಬಟ್ಟೆಯನ್ನು ಸರಕಾರ ನಿಗದಿ ಮಾಡುವುದೆಂದೂ ಇದರಲ್ಲಿ ಕೈಮಗ್ಗದ ಬಟ್ಟೆಯೂ ಸೇರಿದೆಯೆಂದೂ ವರ್ತಮಾನ ಮಂತ್ರಿಗಳಾದ ಶ್ರೀ ಕುಮಾರಯ್ಯನವರು ಹೇಳಿದ್ದಾರೆ.

ಮುಷ್ಕರ ! ಮುಷ್ಕರ !!

ಬೊಂಬಾಯಿ, ಡಿ 4 — ಸರಿಯಾದ ಸೌಕರ್ಯಗಳು ದೊರೆಯದಿದ್ದರೆ ಜಾಡನುಸಾಲಿಗಳು ಮುಷ್ಕರ ಹೂಡುವುದಾಗಿ ತಿಳಿಸಿದ್ದಾರೆ.

೦ ೦

ಸಂಬಳವನ್ನು ಹೆಚ್ಚಿಸದಿದ್ದರೆ ಮುಷ್ಕರ ಹೂಡುವುದಾಗಿ ಬೊಂಬಾಯಿನ ಹತ್ತು ಸಾವಿರ ಮಂದಿ ಉಪಾಧ್ಯಾಯರು ಮುಷ್ಕರ ಹೂಡುವುದಾಗಿ ಹೆದರಿಸಿದ್ದಾರೆ

ಮುಷ್ಕರ ಮುಖಂಡನಿಗೆ ದಿನ ಜುಲ್ಮಾನೆ

ವಾಷಿಂಗ್ಟ್ — ಕಲ್ಲಿದ್ದಲು ಗಣಿ ಕೂಲಿಕಾರ ಸಂಘದ ಅಧ್ಯಕ್ಷ ಶ್ರೀ ಜಾಡ್‌ಲೂಯಿಯವರಿಗೆ ಪ್ರತಿದಿನವೂ ಹತ್ತು ಸಾವಿರ ಡಾಲರ್ ಜುಲ್ಮಾನೆ ಹಾಕಲಾಗಿದೆ ಕೂಲಿಗಾರ ಸಂಘಕ್ಕೆ ಹತ್ತು ಲಕ್ಷ ಡಾಲರ್ ಜುಲ್ಮಾನೆ ವಿಧಿಸಲಾಗಿದೆ

ವಿ. ವಿ. ಪ್ರಚಾರೋಪನ್ಯಾಸ

ಮೈಸೂರು — ಮಹಾರಾಜ ಕಾಲೇಜ್ ಉಪಾಧ್ಯಾಪಕರಾದ ಶ್ರೀ ರಾಘವೇಂದ್ರರಾಯರು ನಾಳೆ ದಿವಸ ಶ್ರೀ ಕೆ. ವೆಂಕಟರಮಣಯ್ಯ ಸ್ಮಾರಕ ಮಂದಿರದಲ್ಲಿ 'ತತ್ವ ಶಾಸ್ತ್ರ ಮತ್ತು ಜನ ಜೀವನ' ಎಂಬ ವಿಷಯದ ಮೇಲೆ ಭಾಷಣ ಮಾಡುತ್ತಾರೆ.

ತಿರುವಾಂಕೂರು ದಿವಾನರ ರಾಜೀನಾಮೆ

ತಿರುವಾಂಕೂರು ದಿವಾನರ ರಾಜೀನಾಮೆ

ತ್ರಿವೇಂಡ್ರಂ ಡಿ 5 — ತಿರುವಾಂಕೂರು ದಿವಾನರಾದ ಸರ್ ಸಿ ಪಿ ರಾಮಸ್ವಾಮಯ್ಯರವರು ತಮ್ಮ ಪದವಿಯಿಂದ ಜನವರಿ 14 ನೇ ತಾರೀಖಿನಿಂದ ಬಿಡುಗಡೆಯಾಗಲು ಶ್ರೀಮನ್ಮಹಾರಾಜರವರ ಅಪ್ಪಣೆ ದೊರೆತಿದೆ.

ಲೀಗಿನ ಕುತಂತ್ರ

ಬೊಂಬಾಯಿ ಡಿ 4 — ಲೀಗು ಪ್ರತಿನಿಧಿಗಳಿಗೆ ಇಂಗ್ಲೆಂಡಿನಲ್ಲಿ ಏನೇ ಭರವಸೆ ದೊರೆಯಿಲಿ ಕಾಂಗ್ರೆಸ್ ಮತ್ತು ಲೀಗಿಗೆ ನಿಜವಾದ ಒಪ್ಪಂದವು ಭಾರತದಲ್ಲೇ ಆಗಬೇಕಾಗಿದೆ ಲೀಗಿನವರು ಕಾಂಗ್ರೆಸ್ಸಿನ ಅತಂಕ ಪಡಿಸುವ ಕುತಂತ್ರವು ಖಂಡನೀಯವು ಎಂದು ಸರದಾರ ಪಟೇಲರು ಹೇಳಿದರು.

ಪುಂಡು ಕಂದಾಯ

ಅಹಮದಾಬಾದ್ ಡಿ 4 — ಕೋಕು ಪುರಭಾಗದ ಪ್ರಜೆಗಳ ಮೇಲೆ ಡಿ|| ಮ್ಯಾಜಿಸ್ಟ್ರೇಟರು 10 ಸಾವಿರ ರೂ. ಪುಂಡು ಕಂದಾಯ ಹಾಕಿದ್ದಾರೆ.

ಟಿಕೀಟು ಕಳ್ಳ

ಮದರಾಸು ಡಿ 5— ಒಬ್ಬ ಪ್ರಯಾಣೀಕನ ಹಣದ ಚೀಲ ಮತ್ತು ರೈಲ್ವೆ ಟಿಕೀಟು ಕದ್ದ ಒಬ್ಬ ಕಳ್ಳನು ಸ್ಪೇಷ್ಯಲ್ ಮಾಸ್ಟರಿಂದ ಟಿಕೀಟಿನ ಹಣವನ್ನು ವಾಪಸು ಪಡೆಯಲು ಹೋದಾಗ ಹಿಡಿಯಲ್ಪಟ್ಟನು.

ನರ್ಸ್‌ಗಳಾಗಿರಿ

ಮದರಾಸು ಡಿ 5 — ಭಾರತದ ವಿಕ್ಷಿತ ನರ್ಸ್‌ಗಳ ಸಮ್ಮೇಳನದ 35 ನೇ ವಾರ್ಷಿಕಾಧಿವೇಶನದಲ್ಲಿ ಮದರಾಸು ಗವರ್ನರವರ ಪತ್ನಿ ಲೇಡಿ ನಿಯವರು ಮಾಡಿದ ಪ್ರಾರಂಭ ಭಾಷಣದಲ್ಲಿ ಈ ಘನವಾದ ಉದ್ಯೋಗಕ್ಕೆ ಹೆಚ್ಚು ಮಂದಿ ಸ್ತ್ರೀಯರು ಬರಲು ಅವರ ಸಂಬಳದರ್ಜೆ ಸ್ಥಿತಿಗತಿ ವಾಸಸ್ಥಾನ ಮುಂತಾದುವುಗಳು ಉತ್ತಮ ಪಡಿಸಲ್ಪಡಿಸಲು ವಿನಂತಿಸಿದರು

ಸಾವಿರ ಗುಡಿಸಲು ನೀರಿನಪಾಲು

ಮದರಾಸು ಡಿ 5— ಅಡ್ಯಾರು ನದಿಯ ಪ್ರವಾಹದಿಂದ ಸಾವಿರ ಗುಡಿಸಲುಗಳು ಕೊಚ್ಚಿಹೋದವು.

ಪ್ರೊಫೆಸರ್ ಸತ್ತರು

ಡಾಕಾ ಡಿ 4 — ಈ ದಿನ ಒಂದೆರಡು ಇರಿತ ನಡೆದಿದೆ ಗಲಭೆಯಲ್ಲಿ ಗಾಯಗೊಂಡಿದ್ದ ಕಾಲೇಜು ಪ್ರೊಫೆಸರೊಬ್ಬರು ಆಸ್ಪತ್ರೆಯಲ್ಲಿ ತೀರಿ ಹೋದರು

ಮುಸ್ಲಿಂರು ರಾಷ್ಟ್ರ ಕೂಟದಲ್ಲಿ ಭಾಗವಹಿಸಿದರು

ಬೊಂಬಾಯಿ ಡಿ 5 — ಕೇಂದ್ರ ಸರ್ಕಾರದಲ್ಲಿ ಮುಸ್ಲಿಂ ಲೀಗ್ ಭಾಗವಹಿಸಿದಂತೆ ರಾಷ್ಟ್ರ ಕೂಟದಲ್ಲಿ ಭಾಗವಹಿಸುವುದು ಎಂಬುದಾಗಿ ಸರ್ದಾರ್ ಪಟೇಲ್ ತಾಜ ಹೋಟಲಿನ ವರ್ತಕ ಸಭೆಯಲ್ಲಿ ತಿಳಿಸಿದರು.

3500000 ಡಾಕಿರ ಜುಲ್ಮಾನೆ

ವಾಷಿಂಗ್ಟ್ ಡಿ 4.... ಕಲ್ಲಿಜ್ಜಲು ಕೆಲಸಗಾರರ ಮುಷ್ಕರ ಸಂಬಂಧದಲ್ಲಿ ಫೆಡರಲ್ ಕೋರ್ಟು ಆಜ್ಞೆಯನ್ನುಲ್ಲಂಘಿಸಿ ಅಗೌರವ ಪಡಿಸಿದ ಆಪಾದನೆ ಮೇಲೆ ಯುನೈಟೆಡ್ ಮೈಕ್ ಕೆಲಸಗಾರರ ಸಂಘಕ್ಕೆ 3500000 ಡಾಲರುಗಳೂ ಮುಖಂಡ ಲೂಯಿಗೆ ಪ್ರತ್ಯೇಕ 10 ಸಾವಿರ ಡಾಲರುಗಳೂ ಜುಲ್ಮಾನೆ ಹಾಕಲಾಗಿದೆ.

ಲಂಡನ್ ಡಿ 4 — 12745 ಟನ್ ಬಾಂಬುಗಳು ಈ ಯುದ್ಧ ಕಾಲದಲ್ಲಿ ವಿಮಾನ ಮತ್ತು ಏ ಅಸ್ತ್ರಗಳಿಂದ ಲಂಡನ್ ಮೇಲೆ ಹಾಕಲಾಯಿತೆಂದು ವಂದೀಯಗಿದೆ.

ಷಾಂಘಾಯಿ ಡಿ 4 — ಚೈನಾದಿಂದ ಬ್ರಿಟಿಷ್ ಸೈನ್ಯಗಳು ಪೂರ್ತಿ ವಾಪಸ್ಸಾದವು.

ಲಂಡನ್ ಡಿ 4 — ಆಟಂ ಬಾಂಬಿನ ಉಪಯೋಗವನ್ನು ನಿರೋಧಿಸುವ ಪರ್ಲಾಡನ್ನು ಮಾಡಲು ಸರಕಾರವು ಪ್ರಯತ್ನಿಸುತ್ತಿರುವುದಾಗಿ ಅಟ್ಲಿಯವ ಕಾಮನ್ಸ್‌ನಲ್ಲಿ ತಿಳಿಸಿದರು.

ಮದ್ರಾಸ್ ಸರಕಾರದ ಬಹುಮಾನ

ಬಳ್ಳಾರಿಯ ಕ್ಯಾಪ್ಟನ್ ಕೆ. ಮರಿಸ್ವಾಮಪ್ಪ ಎಂ. ಬಿ ಬಿ ಎಸ್. ಮಿಲಿಟರಿ ಕಛೇರಿ ಇವರು ಯುದ್ಧದಲ್ಲಿ ಬಹು ಕರ್ತವ್ಯನಿಷ್ಠರಾಗಿ ಕೆಲಸ ಮಾಡಿ ವಿಶೇಷ ಅಧಿಕಾರಿಗಳ ಮೆಚ್ಚುಗೆ ಪತ್ರವು ಮಿಲಿಟರಿ ಕ್ರಾಸ್ ಮುಂತಾದ ಪದಕಗಳನ್ನು ಪಡೆದುದಕ್ಕಾಗಿ ಮದ್ರಾಸ್ ಸರ್ಕಾರವು ಹೋದವಾರ ಅವರಿಗೆ 5000 ರೂ ಗಳನ್ನು ಬಹುಮಾನ ಸಲ್ಲಿಸಿದರು. ಹೀಗೆ ಈ ಇಲಾಖೆಯಲ್ಲಿ ಇಂತಹ ನಗದೀ ಬಹುಮಾನ ಪಡೆದವರಲ್ಲಿ ಡಾ || ಕ್ಯಾಪ್ಟನ್ ಜೆ. ಮಥಿಯಪ್ಪನವರೇ ಮೊದಲಿಗರು.

ತಮಿಳನಾಡು ಎಂ.ಎಲ್. ಎ.ಗಳ ರಾಜೀನಾಮೆ

ನಿರ್ಧಾರ

ಮದ್ರಾಸ್ ಮಂತ್ರಿಗಳು ಕಾಂಗ್ರೆಸ್ ಪಕ್ಷದ ಸದಸ್ಯರನ್ನಾಗಲೀ ಕಡೆಗೆ ಪ್ರಾಂತಿಕ ಅಸೆಂಬ್ಲಿಯನ್ನಾಗಲೀ ನಿರಾಶಾದಲೇ ಹಿಟ್ಲರ್ ಮುಸ್ಸೋಲಿನಿಗಳ ಹಾಗೆ ತಮ್ಮ 'ಡಿಕ್ಟೇಟ್ರಿಕ್' ಸ್ಕೀಮುಗಳನ್ನು ಅಮಲಿನಲ್ಲಿ ತರುವುದಕ್ಕೆ ಮದರಾಸು ಇಲಾಖೆಯನ್ನು ನಗೆಪಾಟಲಿಗೆ ಗುರಿಮಾಡುತ್ತಿರುವುದರಿಂದ ತಮಿಳ್ನಾಡಿನ ಎಲ್ಲಾ ಶಾಸನ ಸಭೆಯ ಸದಸ್ಯರು ಶಾಸನ ಸಭೆಗೆ ರಾಜೀನಾಮೆ ಕೊಡಬೇಕೆಂದು ಕರೆಯಿತ್ತಿದ್ದಾರೆ. ಫಿರ್ಕ ಉಚ್ಚ ಕಾಂಗ್ರೆಸ್ ಪ್ರತಿನಿಧಿಗಳೂ ಈ ಕರೆಗೆ ಮನ್ನಣೆ ಕೊಟ್ಟಿದ್ದಾರೆ. ಮದ್ರಾಸ್ ಮೇಲ್ ಪತ್ರಿಕೆಯು ಈ ವಿಷಯವನ್ನು ಪ್ರಕಟಿಸಿದೆ.

ಜವಹರಲಾಲರ ಸ್ಥಳಕ್ಕೆ ರಾಜಾಜಿಯವರೇ ?

ಜವಾಹರಲಾಲರ ಈ ೧೫ ದಿವಸಗಳ ಕಾರ್ಯಕ್ರಮಗಳಿಗೂ ಪ್ರೀತಿಸಿದೆಂಟಗಳಿಗೂ ಮತ್ತು ವಿದೇಶಗಳಲ್ಲಿ ಕಲವು ಲೀಗ್ ಸದಸ್ಯರನ್ನು ರಾಯಭಾರಿಗಳನ್ನಾಗಿ ನೇಮಿಸಲು ಕೊಟ್ಟ ಸಲಹೆಯನ್ನು ಪಂಡಿತರು ತಿರಸ್ಕಾರ ಮಾಡಿದ್ದರಿಂದಲೂ ವೈಸ್ರಾಯರು ರೋಸಿಗೊಂಡು ತಮ್ಮ ಎಗ್ಜಿಕ್ಯುಟೀವ್ ಕೌನ್ಸಿಲ್ಲಿನ ಉಪಾಧ್ಯಕ್ಷ ಸ್ಥಾನಕ್ಕೆ ಶ್ರೀ ರಾಜಾಜಿಯವರನ್ನು ನೇಮಕಮಾಡಲು ಯತ್ನಿಸುತ್ತಿರುವರೆಂದು ಡೆಲ್ಲಿಯಿಂದ ಸುದ್ದಿ ಬಂದಿದೆ. ಆದರೆ ಪಂಡಿತರ ವಿರುದ್ಧ ರಾಜಾಜಿಯವರು ಆ ಸ್ಥಾನವನ್ನು ಸ್ವೀಕರಿಸುವರು ?.

ಚಂಡಾ ಏಟು ವಜಾ

ಮದರಾಸು ಡಿ. 3 — ಜೈಲುಗಳಲ್ಲಿ ಉಪವಾಸ ಸತ್ಯಾಗ್ರಹ ನಡೆಸುವ ಖೈದಿಗಳಿಗೆ ಚಂಡಾ ಏಟು ಹೊಡೆಯುವುದನ್ನು ಮದರಾಸು ಸರಕಾರವು ವಜಾ ಮಾಡಿದೆ.

ಸತ್ಯವಾದಿ

ದಿನ ಪತ್ರಿಕೆ. ತಿಂಗಳಿಗೆ ಆರಾಣೆ

ಸೋಮವಾರದ ಸಂಚಿಕೆ

ವಾರ್ಷಿಕ ಚಂದಾ

ಪರಸ್ಥಳಕ್ಕೆ ಅಂಚೆಖರ್ಚು ಸೇರಿ 1-12-0

For Quality Printing

L. N. Press

Srirampet, MYSORE

Edited, Printed and Published by M. S Krishna Rao at the Satyavadi Press Chamaraj Agrahar Mysore.

At Opera

2nd Houseful Week

Uttami

ಕಾಳಿ.ಎನ್. ರತ್ನ, ಬಿ.ಎಸ್.ದೊರೆರಾಜ್

ಸ್ವಾವಿ ನಾರ್ಥ. ಬಿ.ಎಸ್- ಕೃಷ್ಣವೇಣಿ

ರಾಜಾಕಾಂತಂ ಪಾತ್ರವಹಿಸಿರುವ

ಉತ್ತಮಿ

(ತಮಿಳು ಚಿತ್ರ)

At Ranjit — From 6-12-46

ROYAL MAIL

ಯುಸಫ್ ಖಾನು — ಯಶ್ವಂತ ದೇವ್

ಪಾತ್ರವಹಿಸಿರುವರು

ರಾಯಲ್ ಮೇಲ್

ಸುಖ ಆರೋಗ್ಯ ಆನಂದದಾಯಕ

ಜೀವಿತಕ್ಕೆ



ಸ್ಟೀಮ್ಡ್ ಮಾಡಿದ ಉತ್ಕೃಷ್ಟ ಹಿಂಗಿನ ಪುಡಿ ಉಪಯೋಗಿಸಿ.

ಈ ಹಿಂಗಿನ ಪುಡಿಯು ಅತ್ಯಂತ ಪರಿಶುದ್ಧವಾದುದು. ನೀರನ್ನು ಸೇರಿಸದೇ ತಯಾರಿಸಲ್ಪಟ್ಟಿದೆ. ಅತಿ ಘನವಾದ ಗುಣವುಳ್ಳದ್ದು. ಎಲ್ಲಾ ಸನಾತನ ಸಂಸಾರಗಳಲ್ಲಿ ಉಪಯೋಗಿಸಲು ಅರ್ಹವಾದುದು. ಒಂದು ಚಿಕ್ಕ ಚಿಟಿಕೆಯಷ್ಟನ್ನು ತಯಾರಿಸುತ್ತಿರುವ ಆಹಾರ ಪದಾರ್ಥಗಳಲ್ಲಿ ಹಾಕಿದಲ್ಲಿ ದೀರ್ಘವಾದ, ಸುಮನೋಹರವಾದ ವಾಸನೆಯನ್ನು ಕಲ್ಪಿಸುವುದಲ್ಲದೆ ಹೆಚ್ಚು ರುಚಿಯನ್ನುಂಟು ಮಾಡುತ್ತದೆ. ಎಲ್ಲಾ ತರಗಾರ ವ್ಯಾಧಿಗಳಿಗೂ ಒಂದು ಸಂಪೂರ್ಣ ಔಷಧದಂತಿದೆ. ಒಂದು ಸಾರಿ ಉಪಯೋಗಿಸಿದ್ದಲ್ಲಿ ನಂಬಿಕೆಯಿನ್ನುಂಟು ಮಾಡುವುದಲ್ಲದೆ, ಸದಾ ಅದನ್ನು ಉಪಯೋಗಿಸುವಂತೆ ಮನಗೊಳಿಸುವುದು. ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ ಒಂದು, ಅರ್ಧ, ಕಾಲು ಪೌಂಡು ಮತ್ತು ಒಂದು ಪೌಂ ಸ್ಯಾಕೆಟ್ಟುಗಳಲ್ಲಿ ದೊರೆಯುತ್ತವೆ. ಬೆಲೆ ಒಂದು ಪೌಂಡಿಗೆ ರೂ. 1-8-0 ಮಾತ್ರ.

ನಮ್ಮ ಸುಸ್ಪಂದ ಅಡಿಕೆಪುಡಿ ಒಂದು ವೈಶಿಷ್ಟ್ಯ

ನಮ್ಮ ಶ್ರೀ ಓಂ ಗುರುತಿನ ಕೇಸರಿ ಅತ್ಯಂತ ಪರಿಶುದ್ಧವಾದ ಪಾತರಿಯಾದುದು. ವಿವರಗಳಿಗೆ ಮತ್ತು ಕಿರಣ ವ್ಯಾಪಾರಿಗಳು — ಬರೆಯಿರಿ —

ಬಲ್ಲಭದಾಸ್ ತೇಜ್ ಪಾಲ್,

(ಹಿಂಗು, ಕೇಸರಿ ಮತ್ತು ಕಿರಣ ವ್ಯಾಪಾರಿಗಳು)

೧೪. ಗೋವಿಂದಪ್ಪ ಹಾಯಿಕ್ಕ್ ರಸ್ತೆ, ಜಿ. ಟಿ. ಮದರಾಸು.

— ರಾಜ್‌ಕಮಲ್, ಮೈಸೂರು —

6-12-46 ರಿಂದ — 4 ನೇ ವಾರ

"ಡಾಕ್ಟರ್ ಕೋಟ್ನಿಸ್ ಕಿ ಅಮರ್ ಕಹಾನಿ"

ಭೂಮಿಕೆ:— * ಜಯಶ್ರೀ * ಶಾಂತಬಾಯಿ * ಉಲ್ಹಾಸ್

6-12-46 ರಿಂದ 4 ದಿವಸಗಳು ಮಾತ್ರ. ಜೊತೆಗೆ 10-30 ಕ್ಕೆ

ಅಬ್ಬುತ ಕನ್ಯೆ

ಪಾತ್ರ:— * ದೇವಿಕಾರಾಣಿ * ಅಶೋಕ್ ಕುಮಾರ್

ಶಕ್ತಿ ಸುಧಾ ಸೇವಿಸಿ

ರಕ್ತವೃದ್ಧಿಗೆ, ಧಾತುಪುಷ್ಟಿಗೆ ಸಂಜೀವನ